# www.karunaduexams.com

ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್- ಡಿಸೆಂಬರ್,6, 2016

www.karunaduexams.com

1. “ವಿಶ್ವ ಪ್ರಭಾವಿ ಭಾಷೆ ಸೂಚ್ಯಂಕ (World Power Language Index)-2016” ಪ್ರಕಾರ ವಿಶ್ವದ ಅತ್ಯಂತ ಪ್ರಭಾವಿ ಭಾಷೆ ಯಾವುದು?

ಅ) ಇಂಗ್ಲೀಷ್

ಆ) ಫ್ರೆಂಚ್

ಇ) ಸ್ಪಾನಿಷ್

ಈ) ಹಿಂದಿ

ಇಂಗ್ಲೀಷ್

ವಿಶ್ವ ಪ್ರಭಾವಿ ಭಾಷೆ ಸೂಚ್ಯಂಕ-2016 ಪ್ರಕಾರ ಇಂಗ್ಲೀಷ್ ಭಾಷೆ ವಿಶ್ವದ ಅತ್ಯಂತ ಪ್ರಭಾವಿ ಭಾಷೆಯಾಗಿ ಹೊರಹೊಮ್ಮಿದ್ದು, ಸೂಚ್ಯಂಕದಲ್ಲಿ ಪ್ರಥಮ ಸ್ಥಾನ ಗಿಟ್ಟಿಸಿಕೊಂಡಿದೆ. ವಿಶ್ವ ಪ್ರಭಾವಿ ಭಾಷೆ ಸೂಚ್ಯಂಕವನ್ನು ವಿಶ್ವ ಆರ್ಥಿಕ ವೇದಿಕೆ ಹೊರತಂದಿದೆ. ಜಿ-7 ಗುಂಪಿನ ರಾಷ್ಟ್ರಗಳ ಪೈಕಿ ಯುಎಸ್, ಯುಕೆ ಮತ್ತು ಕೆನಡಾದಲ್ಲಿ ಇಂಗ್ಲೀಷ್ ಭಾಷೆ ಅತಿ ಹೆಚ್ಚು ಪ್ರಾತಿನಿಧ್ಯ ಹೊಂದಿದೆ. ಸೂಚ್ಯಂಕದಲ್ಲಿ ಇಂಗ್ಲೀಷ್ ನಂತರ ಮ್ಯಾಂಡ್ರಿನ್, ಫ್ರೆಂಚ್ ಮತ್ತು ಸ್ಪಾನಿಷ್ ಭಾಷೆಗಳು ಸ್ಥಾನ ಪಡೆದಿವೆ.

2. ಈ ಕೆಳಗಿನ ಯಾರು ಉಜ್ಬೇಕಿಸ್ತಾನದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ?

ಅ) ಶವ್ಕತ್ ಮಿರ್ಝಿಯೊಯೆವ್

ಆ) ನರಿಮೊನ್ ಉಮರೊವ್

ಇ) ಇಸ್ಲಾಂ ಕರಿಮೊವ್

ಈ) ಬೆಂಜಮಿನ್ ಉಮರೊವ್

ಶವ್ಕತ್ ಮಿರ್ಝಿಯೊಯೆವ್

ಉಜ್ಬೇಕಿಸ್ತಾನದ ಹಂಗಾಮಿ ಅಧ್ಯಕ್ಷರಾದ ಶವ್ಕತ್ ಮಿರ್ಝಿಯೊಯೆವ್ ರವರು ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಉಜ್ಬೇಕಿಸ್ತಾನದ ಅಧ್ಯಕ್ಷರಾಗಿದ್ದ ಇಸ್ಲಾಂ ಕರಿಮೊವ್ ನಿಧನರಾದ ನಂತರ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಶವ್ಕತ್ ರವರು ಜಯಶೀಲರಾಗುವ ಮೂಲಕ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

3. ಈ ಕೆಳಗಿನ ಯಾವ ಕಂಪನಿಗಳು ದೇಶದ ಅತಿ ದೊಡ್ಡ ತೈಲ ಶುದ್ದೀಕರಣ ಘಟಕ ಸ್ಥಾಪಿಸಲು ಒಪ್ಪಂದಕ್ಕೆ ಸಹಿ ಹಾಕಿವೆ?

I) ಇಂಡಿಯನ್ ಆಯಿಲ್ ಕಾರ್ಪೋರೇಷನ್

II) ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್

III) ರಿಲಾಯನ್ಸ್ ಕಾರ್ಪೋರೇಷನ್

IV) ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್

www.karunaduexams.com

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) I, II & III

ಆ) I, III & IV

ಇ) I, III & IV

ಈ) I, II, III & IV

I, III & IV

ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ದೇಶದ ಅತಿ ದೊಡ್ಡ ತೈಲ ಶುದ್ಧೀಕರಣ ಘಟಕ ಸ್ಥಾಪಿಸಲು ಒಪ್ಪಂದಕ್ಕೆ ಸಹಿಹಾಕಿವೆ. ಈ ಯೋಜನೆಯ ಅಂದಾಜು ವೆಚ್ಚ $ 30 ಬಿಲಿಯನ್.

4. ಈ ಕೆಳಗಿನ ಯಾರು "2016 ಏಷ್ಯಾ ವರ್ಷದ ವ್ಯಕ್ತಿ(Asian of the Year)" ಗೌರವಕ್ಕೆ ಪಾತ್ರರಾಗಿದ್ದಾರೆ?

ಅ) ರತನ್ ಟಾಟ

ಆ) ನರೇಂದ್ರ ಮೋದಿ

ಇ) ಸಚಿನ್ ಬನ್ಸಲ್

ಈ) ಮುಖೇಶ್ ಅಂಬಾನಿ

ಸಚಿನ್ ಬನ್ಸಲ್

ಸಿಂಗಾಪುರ ಮೂಲದ "ದಿ ಸ್ಟೈಟ್ ಟೈಮ್ಸ್" ಸುದ್ದಿಪತ್ರಿಕೆಯು ಫ್ಲಿಫ್ ಕಾರ್ಟ್ ಸಂಸ್ಥೆಯ ಸಂಸ್ಥಾಪಕರಾದ ಸಚಿನ್ ಬನ್ಸಲ್ ಮತ್ತು ಬಿನ್ನಿ ಬನ್ಸಲ್ ರವರನ್ನು ಜಂಟಿಯಾಗಿ "2016 ಏಷ್ಯಾ ವರ್ಷದ ವ್ಯಕ್ತಿ" ಎಂದು ಬಣ್ಣಿಸಿದೆ. ಅತ್ಯುತ್ತಮ ತಂತ್ರಜ್ಞಾನ ಬಳಸಿ ಗ್ರಾಹಕರಿಗೆ ಉಪಯೋಗವಾಗುವ ಉದ್ದಿಮೆಯನ್ನು ಆರಂಭಿಸಿದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

5. 2016 "ವಿಶ್ವ ಮಣ್ಣು ದಿನ"ದ ಧ್ಯೇಯ ವಾಕ್ಯ ________?

ಅ) Soils, a solid ground for life

ಆ) Soils and Pulses, a symbiosis for life

ಇ) Soil is precious as water

ಈ) Protect soil for feature

Soils and Pulses, a symbiosis for life

www.karunaduexams.com

ವಿಶ್ವ ಮಣ್ಣು ದಿನವನ್ನು ಪ್ರತಿವರ್ಷ ಡಿಸೆಂಬರ್ 5 ರಂದು ಆಚರಿಸಲಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಜೇವಿಕ್ಕೆ ಮಣ್ಣಿನ ಅಗತ್ಯತೆ ಬಗ್ಗೆ ಅರಿವು ಮೂಡಿಸುವುದು ಈ ದಿನದ ಉದ್ದೇಶ. Soils and Pulses, a symbiosis for life ಇದು ಈ ವರ್ಷದ ವಿಶ್ವ ಮಣ್ಣಿನ ದಿನದ ಧ್ಯೇಯವಾಕ್ಯ.

6. “2016 ಇಂದ್ರ ನೌಕಪಡೆ” ಸಮರಭ್ಯಾಸ ಭಾರತ ಮತ್ತು ಯಾವ ದೇಶದ ನಡುವೆ ನಡೆಯಲಿದೆ?
   ಅ) ಜಪಾನ್
   ಆ) ರಷ್ಯಾ
   ಇ) ಶ್ರೀಲಂಕಾ
   ಈ) ಆಸ್ಟ್ರೇಲಿಯಾ
   ರಷ್ಯಾ
   2016 ಇಂದ್ರ ನೌಕಪಡೆ ಸಮರಭ್ಯಾಸ ಭಾರತ ಮತ್ತು ರಷ್ಯಾ ನಡುವೆ ಡಿಸೆಂಬರ್ 14 ರಿಂದ 21 ರವರೆಗೆ ವಿಶಾಖಪಟ್ಟಣ ಮತ್ತು ಬಂಗಾಳ ಕೊಲ್ಲಿಯಲ್ಲಿ ನಡೆಯಲಿದೆ. ಕರಾವಳಿ ತೀರಾ ಮತ್ತು ಸಾಗರದಲ್ಲಿ ಎರಡು ಹಂತದಲ್ಲಿ ಈ ಸಮರಭ್ಯಾಸ ನಡೆಯಲಿದೆ. ಡಿಸೆಂಬರ್ 14-18 ರವರೆಗೆ ವಿಶಾಖಪಟ್ಟಣದಲ್ಲಿ ಹಾಗೂ ಡಿಸೆಂಬರ್ 19-21 ರವರೆಗೆ ಬಂಗಾಳ ಕೊಲ್ಲಿಯಲ್ಲಿ ನಡೆಯಲಿದೆ.

7. ನಾಗರಿಕ ವಿಮಾನಯಾನ ನಿರ್ದೇಶನಾಲಯದ ನೂತನ ಮುಖ್ಯಸ್ಥರಾಗಿ ಯಾರು ನೇಮಗೊಂಡಿದ್ದಾರೆ?
   ಅ) ಸುರೇಂದ್ರ
   ಆ) ಬಿ ಎಸ್ ಬುಲ್ಲರ್
   ಇ) ಸತ್ಯೇಂದ್ರ ವರ್ಮಾ
   ಈ) ಚಂದ್ರಬಾಬು ನಾಯಕ್
   ಬಿ ಎಸ್ ಬುಲ್ಲರ್
   ಬಿ ಎಸ್ ಬುಲ್ಲರ್, 1986ನೇ ಬ್ಯಾಚ್ ಐಎಎಸ್ ಅಧಿಕಾರಿ ರವರನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯದ ನೂತನ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ. ಕಳೆದ ನಾಲ್ಕು ತಿಂಗಳಿಂದ ಈ ಹುದ್ದೆ ಖಾಲಿ ಉಳಿದಿತ್ತು. ನಾಗರಿಕ ವಿಮಾನಯಾನಕ್ಕೆ ಸಂಬಂಧಿಸಿದಂತೆ ಸುರಕ್ಷತೆ ಗುಣಮಟ್ಟ ಅನುಷ್ಠಾನ, ಕಾರ್ಯಾಚರಣೆ ಮತ್ತು ಸಿಬ್ಬಂದಿಗೆ ತರಬೇತಿ ನೀಡುವುದು ಹೊಣೆಗಾರಿಕೆಯನ್ನು ನಿರ್ದೇಶನಾಲಯ ಹೊಂದಿದೆ.

www.karunaduexams.com

8. ಫೋರ್ಬ್ಸ್ ನಿಯತಕಾಲಿಕೆ ಪ್ರಕಾರ ಅತ್ಯಧಿಕ ಸಂಭಾವನೆ ಪಡೆಯುವ ಸಾರ್ವಕಾಲಿಕ ಕ್ರೀಡಾಪಟು ಯಾರು?
ಅ) ಟೈಗರ್ ವುಡ್
ಆ) ಕ್ರಿಸ್ಟಿಯಾನೋ ರೊನಾಲ್ಡೊ
ಇ) ಟೈಗರ್ ವುಡ್ಸ್
ಈ) ಮೈಕೆಲ್ ಜೋರ್ಡನ್
ಮೈಕೆಲ್ ಜೋರ್ಡನ್
ಮಾಜಿ ಬ್ಯಾಸ್ಕೆಟ್ ಬಾಲ್ ಆಟಗಾರ ಮೈಕೆಲ್ ಜೋರ್ಡನ್ ರವರು ಅತ್ಯಧಿಕ ಸಂಭಾವನೆ ಪಡೆಯುವ ಸಾರ್ವಕಾಲಿಕ ಕ್ರೀಡಾಪಟು ಎಂದು ಫೋರ್ಬ್ಸ್ ನಿಯತಕಾಲಿಕೆ ಬಣ್ಣಿಸಿದೆ. ಟೈಗರ್ ವುಡ್, ಲಿಯೊನೆಲ್ ಮೆಸ್ಸಿ ಮತ್ತು ಕ್ರಿಸ್ಟಿಯಾನೋ ರೊನಾಲ್ಡೊ ಅತ್ಯಧಿಕ ಸಂಭಾವನೆ ಪಡೆಯುವ ಆಟಗಾರರಾಗಿದ್ದಾರೆ.

9. "ಬರ್ನಾಡ್ ಕರ್ಝುನುವೆ (Bernard Cazeneuve)" ಯಾವ ದೇಶದ ನೂತನ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ?
ಅ) ಸ್ಪೇನ್
ಆ) ಫ್ರಾನ್ಸ್
ಇ) ಮೆಕ್ಸಿಕೊ
ಈ) ನ್ಯೂಜಿಲ್ಯಾಂಡ್
ಫ್ರಾನ್ಸ್
ಬರ್ನಾಡ್ ಕರ್ಝುನುವೆ ರವರನ್ನು ಫ್ರಾನ್ಸ್ ನ ನೂತನ ಪ್ರಧಾನಿಯಾಗಿ ನೇಮಕ ಮಾಡಲಾಗಿದೆ. ಮ್ಯಾನುಯೆಲ್ ವಾಲ್ಸ್ ರವರು 2017 ರಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸುವ ಸಲುವಾಗಿ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ ಕಾರಣ ಪ್ರಧಾನಿ ಹುದ್ದೆ ತೆರವಾಗಿತ್ತು.

10. "ಮಂಚರ್ ಸರೋವರ (Manchar Lake)" ಯಾವ ದೇಶದ ಅತಿ ದೊಡ್ಡ ಸರೋವರ?
ಅ) ಪಾಕಿಸ್ತಾನ
ಆ) ಬಾಂಗ್ಲದೇಶ
ಇ) ನೇಪಾಳ
ಈ) ಶ್ರೀಲಂಕಾ
ಪಾಕಿಸ್ತಾನ

www.karunaduexams.com

ಮಂಚರ್ ಸರೋವರ ಪಾಕಿಸ್ತಾನದ ಅತಿ ದೊಡ್ಡ ಹಾಗೂ ಏಷ್ಯಾದ  ದೊಡ್ಡ ಸಿಹಿ ನೀರಿನ ಸರೋವರಗಳಲ್ಲಿ ಒಂದಾಗಿದೆ. ಸಿಂಧ್ ನ ಜಮಶೊರೊ ಜಿಲ್ಲೆಯಲ್ಲಿ ಈ ಸರೋವರ ಇದೆ.

www.karunaduexams.com